ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15,78,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 - ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,49,70,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 - ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 35,97,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 - ಬಂದಿಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬಂದಿಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,91,54,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಶ್ರೀ ವಾಟಾಳ್ ನಾಗರಾಜ್ :- ಖಂಡಿತ ಇಲ್ಲ. ಇದು ಪುರಸಭೆಗಳಿಗಿಂತ ಕೊನೆಯಾಯಿತು.

ಅಧ್ಯಕ್ಷರು :- ಈಗಾಗಲೇ ಪ್ರಸ್ತಾಪವು ಅಂಗೀಕರಿಸಲ್ಪಟ್ಟಿದೆ.

ಶ್ರೀ ವಾಟಾಳ್ ನಾಗರಾಜ್ :- ಯಾವ ಸಚಿವರೂ ಕೂಡ ಉತ್ತರ ಕೊಡಲಿಲ್ಲ. ಮುಖ್ಯಮಂತ್ರಿಗಳೇ ಮೂಲ ದೇವರೂ ಇದ್ದಹಾಗೆ; ಇದಕ್ಕೆ ಬೇರೆ ಮಂತ್ರಿಗಳ ಸಂಪೂರ್ಣ ಒಪ್ಪಿಗೆ ಇದೆಯೇ?

ಅಧ್ಯಕ್ಷರು :- ಆಯಿತು ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ವಿಷಯ :- ವಿದ್ಯುಚ್ಛಕ್ತಿಯ ಮಂಡಳಿಯ ಕಾರ್ಯನಿರ್ವಹಣೆ ಬಗ್ಗೆ ಶಿಫಾರಸ್ಸು ನೀಡುವ ವಿಚಾರವನ್ನು ಜಂಟಿ ಸದನ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯನಿರ್ವಹಣೆ ಹಾಗೂ ಆಡಳಿತ ದಕ್ಷತೆಯನ್ನು ಉತ್ತಮ ಪಡಿಸುವ ಸಲುವಾಗಿ ಶಿಫಾರಸ್ಸುಗಳನ್ನು ನೀಡಲು ರಚಿಸಿದ ಕರ್ನಾಟಕ ವಿಧಾನ ಮಂಡಲದ ಜಂಟೀ ಸದನ ಸಮಿತಿಯ ಕಾರ್ಯ ವ್ಯಾಪ್ತಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಗಮದ ಕಾರ್ಯ ವ್ಯಾಪ್ತಿಯನ್ನು ಒಳಪಡಿಸಲಾಗಿದೆ.

ಶ್ರೀ ಸಿ. ಬೈರೇಗೌಡ :- ನಾನು ಆಗಲೇ ಮಾತನಾಡತಕ್ಕ ಸಮಯದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆ ಸಾಯಿಲ್ ಕನ್ಸರ್‌ವೇಟರ್ ಗೆ ಸಂಬಂಧಪಟ್ಟ ಹಾಗೆ...

ಸಭಾಧ್ಯಕ್ಷರು :- ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ :- ಹಣ ಖರ್ಚಾಗುತ್ತಿದೆ; ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ.

ಸಭಾಧ್ಯಕ್ಷರು :- ಅದಕ್ಕೆ ಅವಕಾಶ ಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1992-93ನೇಸಾಲಿನ ಅನುಪೂರಕ ಅಂದಾಜು ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :- ಈಗ ಸುಮಾರು 320.57 ಕೋಟಿ ರೂಪಾಯಿಗಳಿಗೆ ಪೂರಕ ಬೇಡಿಕೆಗಳನ್ನು ಮಂಡಿಸಲಾಗಿದೆ. ಅದರಲ್ಲಿ ಕ್ಯಾಷ್ ಡೆಫಿಸಿಟ್‌ಪ್ಲೋ ಇರತಕ್ಕಂಥದ್ದು 218.78 ಕೋಟಿ. ಅದರಲ್ಲಿ ಪ್ಲಾನ್ 104.12 ಕೋಟಿ ನಾನ್ ಪ್ಲಾನ್ 266-45 ಕೋಟಿ. ಈಗ ನಾನ್‌ಪ್ಲಾನ್‌ದು ಹೆಚ್ಚಾಗಿದೆ. ಏಕೆಂದರೆ ಲಾಟರಿಗೆ 82 ಕೋಟಿ, ಕೆ.ಎಸ್.ಆರ್.ಟಿ.ಸಿ. ಗೆ 25 ಕೋಟಿ, ಕೆ.ಇ.ಬಿ.ಗೆ 61 ಕೋಟಿ ಮತ್ತು ಪೆನ್‌ಷನ್‌ಗೆ 34 ಕೋಟಿ. ನಾನ್ ಪ್ಲಾನ್‌ನಲ್ಲಿರುವ 266-45 ಕೋಟಿಯಲ್ಲಿ 202 ಕೋಟಿ ರೂಪಾಯಿ ಈ ಪ್ರಮುಖವಾದಂಥ ಬಾಬುಗಳಿಗೆ ಹೊರಟುಹೋಗಿದೆ. ಅದು ತಾವು ಕೆ.ಇ.ಬಿ. ಗೆ ಹಣ ಕೊಡಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಕೆಎಸ್ಆರ್‌ಟಿಸಿ ಗೆ ಕೊಡಬೇಕಾಗುತ್ತದೆ. ಪೆನ್‌ಷನ್ಸ್‌ಗೂ ಕೂಡ ಕೊಡಬೇಕಾಗುತ್ತದೆ. ಇದು ಹೆಚ್ಚುವರಿ ಬಂದಂಥದ್ದು. ಆಮೇಲೆ ಲಾಟರಿ ಬಗ್ಗೆ ಹೇಳಬೇಕಾದರೆ, ಅದರಲ್ಲಿ ಆದಾಯ ಇದೆ. ಆ ಆದಾಯದ ಹಣವನ್ನು ನಾನ್‌ಪ್ಲಾನ್‌ನಲ್ಲಿ ಪ್ರೈಜ್‌ಗೆ ಕೊಡತಕ್ಕಂಥದ್ದು. ಆದ್ದರಿಂದ Pensions based on AG figures, ಅದು 32 ಕೋಟಿ, payment of prize amount for Single Digit lottery and payment of commission, this is covered by equal receipt--ಅದುಕ್ಯಾಷ್‌ಪ್ಲೋನಲ್ಲಿ ಬರುತ್ತದೆ. 82 ಕೋಟಿ ರೂಪಾಯಿ; Loans to contractors —mobilisation advance - 17.57 ಕೋಟಿ to UKP construction work as per agreement ---ಅದು ರೀ-ಇಂಬರ್ಸ್ ಬಲ್ ಅದು ರೀ - ಇಂಬರ್ಸ್ ಆಗುತ್ತದೆ. ಇನ್ನು ಕೆ.ಎಸ್.ಆರ್.ಟಿ.ಸಿ. ಗೆ subsidy towards total travel concession ಸರ್ಕಾರ ಕೊಡಬೇಕು. ಅದು 25 ಕೋಟಿ ರೂಪಾಯಿಗಳು. Additional capital contribution to KSRTC, 22 ಕೋಟಿ ರೂಪಾಯಿ ಕೊಟ್ಟಿದ್ದೇವೆ. Loans for Ashrya Scheme -- 13.80 ಕೋಟಿ, ಇರಿಗೇಷನ್ ವರ್ಕ್ಸ್‌ನಲ್ಲಿ ಮೈನರ್ಸ್ ಇರಿಗೇಷನ್‌ಗೆ 4.60 ಕೋಟಿ, ಮೇಜರ್ ಇರಿಗೇಷನ್‌ಗೆ 17 ಕೋಟಿ, ರಸ್ತೆಗೆ 11.73 ಕೋಟಿ, ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ Loan subsidy to KEB 61.33 ಕೋಟಿ. ಇನ್ನು ಫ್ಲಡ್ ರಿಲೀಫ್‌ಗೆ 5 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮುಜರಾಯಿ ರಿಪೇರಿ ಕನ್ಸ್ಟ್ರಕ್ಷನ್ ಟೆಂಪಲ್‌ಗೆ ಎಂದು ಒಂದು ಕೋಟಿ ರೂಪಾಯಿ. ಅರಣ್ಯಕ್ಕೆ 5 ಕೋಟಿ ರೂಪಾಯಿ, Incentive prize for Sugarcane through sugar factories 6 ಕೋಟಿ ರೂಪಾಯಿ, ವೆಲ್‌ಫೇರ್ ಆಫ್ ಎಸ್.ಸಿ.ಎಸ್.ಟಿ. 9.11 ಕೋಟಿ ರೂಪಾಯಿ; ಆದ್ದರಿಂದ ಈ ಒಂದು ಬಾಬ್ತುಗಳಿಗೆ ಈಗ ಪೂರಕ ಅಂದಾಜುಗಳನ್ನು ನಾವು ಮಂಡಿಸಿದ್ದೇವೆ. ಇದನ್ನು ದಯಮಾಡಿ ಮಂಜೂರು ಮಾಡಿಕೊಡಬೇಕು ಎಂದು ತಮ್ಮ ಮುಖೇನ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಈ ವರ್ಷ ಮೂರು ಸಪ್ಲಿಮೆಂಟರಿ ಎಸ್ಟಿಮೇಟ್‌ಗಳನ್ನು ಮಂಡಿಸಿ, ತಾವು ಈಗಾಗಲೇ ಎರಡಕ್ಕೆ ಮಂಜೂರಾತಿ ತೆಗೆದುಕೊಂಡಿದ್ದೀರಿ. ಇದು ಮೂರನೆಯದು. ಇದನ್ನು ಈಗ ತೆಗೆದುಕೊಂಡು ಬಂದಿದ್ದೀರಿ. ಫಸ್ಟ್ ಸಪ್ಲಿಮೆಂಟರಿ 117 ಕೋಟಿ